ಆ) ಅರ್ಹರಿದ್ದ ವಂಚಿತ ಕುಟುಂಬಗಳಿಗೆ ಹಾಗೂ ಹೊಸ ಕುಟುಂಬಗಳಿಗೆ ಪಡಿತರ ಚೀಟಿಗಳನ್ನು ಕಳೆದ ಎರಡು ವರ್ಷಗಳಿಂದ ಕೊಡದೇ ಇರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ:

ಇ) ಹಾಗಿದ್ದಲ್ಲಿ ಬೈಲಹೊಂಗಲ ತಾಲ್ಲೂಕಿನಲ್ಲಿ ಅರ್ಹರಿದ್ದ ವಂಚಿತ ಕುಟುಂಬಗಳಿಗೆ ಹಾಗೂ ಹೊಸ ಕುಟುಂಬಗಳಿಗೆ ಪಡಿತರ ಚೀಟಿಯನ್ನು ಕಂಪ್ಯೂಟರ್ ಮಾಡಿ ಒದಗಿಸಲು ಕ್ರಮ ಕೈಗೊಳ್ಳಲಾಗುವುದೇ:

ಶ್ರೀ ರಾಮಲಿಂಗಾರೆಡ್ಡಿ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು)

ಅ) ಹೌದು.

ಆ) ಬಂದಿದೆ.

ಇ) ಬೈಲಹೊಂಗಲ ತಾಲ್ಲೂಕಿನಲ್ಲಿ ಒಟ್ಟು 36,397 ಪಡಿತರ ಚೀಟಿಗಳನ್ನು ಗ್ರಾಮಾಂತರ ಪ್ರದೇಶಗಳಲ್ಲೂ ಹಾಗೂ 915 ಪಡಿತರ ಚೀಟಿಗಳನ್ನು ಪಟ್ಟಣ ಪ್ರದೇಶದಲ್ಲೂ ಗಣಕೀಕರಿಸಲಾಗಿರುತ್ತದೆ. ಗಣಕೀಕರಣದ ವೇಳೆ ಭಾವ ಚಿತ್ರಗಳನ್ನು ತೆಗೆಸಿಕೊಳ್ಳಲು ಹಾಜರಾಗದ 4116 ಕುಟುಂಬಗಳು ಬಾಕಿ ಉಳಿದಿರುತ್ತವೆ. ಇದರ ಜೊತೆಗೆ ಹೊಸದಾಗಿ ಪಡಿತರ ಚೀಟಿಯನ್ನು ಕೋರಿ 4255 ಅರ್ಜಿಗಳು ಸ್ವೀಕೃತವಾಗಿರುತ್ತವೆ. ಇನ್ನೂ ಪಡಿತರ ಚೀಟಿಯನ್ನು ಪಡೆಯದೇ ಇರುವ ಕುಟುಂಬಗಳೇನಾದರೂ ಇದ್ದಲ್ಲಿ ಅವರುಗಳಿಗೂ ಸಹ ಅರ್ಜಿಯನ್ನು ಸಲ್ಲಿಸಲು ಕಾಲಾವಕಾಶವನ್ನು ನೀಡಿ ಗಣಕೀಕೃತ ಪಡಿತರ ಚೀಟಿಯನ್ನು ವಿತರಿಸಲು ಕ್ರಮ ಕೈಗೊಳ್ಳಲಾಗುವುದು.

ತುಮಕೂರು ಜಿಲ್ಲೆಗೆ ಹೇಮಾವತಿಯಿಂದ ಕುಡಿಯುವ ನೀರು

4675 (5085) : ಶ್ರೀ ಎಂ. ಡಿ. ಲಕ್ಷ್ಮೀನಾರಾಯಣ (ತುರುವೇಕೆರೆ) ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ತುಮಕೂರು ಜಿಲ್ಲೆಯಲ್ಲಿ ಕುಡಿಯುವ ನೀರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:

ಆ) ಹೇಮಾವತಿ ಜಲಾಶಯದಿಂದ ಅನೇಕ ತಿಂಗಳಿನಿಂದ ನೀರು ಬಿಡದಿರಲು ಕಾರಣವೇನು;

ಇ) ಕುಡಿಯುವ ನೀರಿನ ಯೋಜನೆಗಳಿಂದ ಕೆರೆಗಳಿಗೆ ನೀರು ಬಿಡದೆ ಬೇರೆ ಕಡೆ ನೀರು ಬಿಟ್ಟಿರುವುದು ನಿಜವೆ:

ಈ) ಹಾಗಿದ್ದಲ್ಲಿ ಹೇಮವತಿ ನೀರನ್ನು ತಕ್ಷಣ ಈ ಕೆರೆಗಳಿಗೆ ಬಿಡಲಾಗುವುದೇ ಯಾವಾಗ ಬಿಡಲಾಗುವುದು?

ಶ್ರೀ ಎಚ್.ಕೆ. ಪಾಟೀಲ್ (ಜಲ ಸಂಪನ್ಮೂಲ ಸಚಿವರು)

ಅ) ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಆ) ಹೇಮಾವತಿ ಜಲಾಶಯದಲ್ಲಿ ನೀರಿನ ಸಂಗ್ರಹಣೆ ಕಾಲುವೆ ಸಿಲ್ ಮಟ್ಟಕಿಂತ ಕಡಿಮೆ ಇದ್ದುದರಿಂದ ನೀರನ್ನು ಬಿಡಲು ಸಾಧ್ಯವಾಗಿರಲಿಲ್ಲ.

ಇ) ನೀರಾವರಿ ಸಲಹಾ ಸಮಿತಿಯ ನಿರ್ಣಯದಂತೆ ಯೋಜನೆಯಲ್ಲಿ ನೀರನ್ನು ಹರಿಸಲಾಗುತ್ತಿದೆ.

ಈ) ಮೇಲಿನ ಉತ್ತರದಿಂದ ಉದ್ಭವಿಸುವುದಿಲ್ಲ.